# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 309 (356)
ಸದಸ್ಯರ ಹೆಸರು : ಶ್ರೀ ಎಫ್. ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) (ಇಂಡಿ)
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು
ಉತ್ತರಿಸುವ ದಿನಾಂಕ : 29.01.2026

| ಪ್ರಶ್ನೆ | ಉತ್ತರ |
|---|---|
| ಅ) ಬಿ.ಕೆ.ಪವಿತ್ರ ತೀರ್ಪು-1ರ ನಂತರ ರಾಜ್ಯ ಸರ್ಕಾರವು ಜೇಷ್ಠತೆ ಸಂರಕ್ಷಣಾ ಕಾಯ್ದೆ ರೂಪಿಸಿ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 44 ಶಾಸನ 2017, ದಿನಾಂಕ:23.06.2018ನ್ನು ಜಾರಿಗೊಳಿಸಿದ್ದಾಗಿಯೂ. ಸದರಿ ಕಾಯ್ದೆ ಜಾರಿಯಾಗದಂತೆ ಸಿಆಸು ಇಲಾಖೆ ಸಂಖ್ಯೆ:ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ:24.06.2019 ರಂದು ಸುತ್ತೋಲೆ ಹೊರಡಿಸುವುದರ ಮೂಲಕ ಎಸ್ಸಿ/ಎಸ್ಟಿ ನೌಕರರ ಜೇಷ್ಠತೆ ಸಂರಕ್ಷಣೆಯಾಗದಂತೆ ನಿರ್ದೇಶನ ನೀಡಿರುವುದರಿಂದ ವಿವಿಧ ಇಲಾಖೆಗಳಲ್ಲಿ ಜೇಷ್ಠತೆಯನ್ನು ಸಂರಕ್ಷಿಸಲಾಗದೇ ಇರುವುದಕ್ಕೆ ಕಾರಣವಾದ ಸುತ್ತೋಲೆಯನ್ನು ಸರ್ಕಾರ ಪೂರ್ವಾನ್ವಯವಾಗಿ ವಾಪಸ್ ಪಡೆಯುವುದೇ: | <u>ದಿನಾಂಕ:24.06.2019ರ ಸುತ್ತೋಲೆ ಸಂಖ್ಯೆ:ಸಿಆಸುಇ 186 ಎಸ್‌ಆರ್‌ಎಸ್ 2018ರಲ್ಲಿ ಜೇಷ್ಠತಾ ಸಂರಕ್ಷಣಾ ಕಾಯ್ದೆ 2017ಕ್ಕೆ ವ್ಯತಿರಿಕ್ತವಾದ ಯಾವುದೇ ಅಂಶಗಳು ಇರುವುದಿಲ್ಲ</u>. ಸದರಿ ಸುತ್ತೋಲೆಯಲ್ಲಿ ಹಿಂಬಡ್ತಿಗೊಳಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ಜೇಷ್ಠತೆಯನ್ನು ಸಂರಕ್ಷಿಸಿ ಈ ಹಿಂದಿನ ಹುದ್ದೆಗೆ ಅದೇ ದಿನಾಂಕದಿಂದ ಅನ್ವಯವಾಗುವಂತೆ ಮುಂಬಡ್ತಿ ನೀಡುವಂತೆ ತಿಳಿಸಲಾಗಿರುತ್ತದೆ ಮತ್ತು ಒಂದುವೇಳೆ ಮುಂಬಡ್ತಿ ರಿಕ್ತ ಸ್ಥಾನಗಳು ಲಭ್ಯವಿಲ್ಲದಿದ್ದಲ್ಲಿ, ಆರ್ಥಿಕ ಇಲಾಖೆ ಸಹಮತಿ ಇರುತ್ತದೆ ಎಂದು ಪರಿಗಣಿಸಿ ಸಂಖ್ಯಾತಿರಿಕ್ತ ಹುದ್ದೆಗಳನ್ನು ಸೃಜನೆಮಾಡುವಂತೆ ಸಹ ಸೂಚನೆಗಳನ್ನು ನೀಡಲಾಗಿರುವ ಹಿನ್ನಲೆಯಲ್ಲಿ, ಎಲ್ಲಾ ಇಲಾಖೆಗಳು ಎಲ್ಲಾ ವೃಂದದ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಅನುಪಾಲನಾ ವರದಿಯನ್ನು ಸಹ ಸಲ್ಲಿಸಲಾಗಿರುತ್ತದೆ. ಈ ಹಂತದಲ್ಲಿ ಸದರಿ ಸುತ್ತೋಲೆಯನ್ನು ಹಿಂಪಡೆಯುವ ಅವಶ್ಯಕತೆ ಇರುವುದಿಲ್ಲ |
| ಆ)ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಉಡುಪಿ ಜಿಲ್ಲಾಧಿಕಾರಿಗಳಿಗೆ ಸಂಖ್ಯೆ:ಸಿಆಸುಇ/ 85/ ಸೆನೇನಿ /2021 , ದಿನಾಂಕ: 04.08.2021 ರಲ್ಲಿ ತಪ್ಪು ಸ್ಪಷ್ಟೀಕರಣ ನೀಡಿ ಮೀಸಲಾತಿ ಜಾರಿಯಾಗದಂತೆ ನಿರ್ದೇಶನ ನೀಡಿರುವ ಅಧಿಕಾರಿಗಳ ಮೇಲೆ ಸರ್ಕಾರ ಶಿಸ್ತು ಕ್ರಮ ಕೈಗೊಳ್ಳದೆ ಇರಲು ಕಾರಣವೇನು?: | ಈ ಇಲಾಖೆಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 21 ಎಸ್‌ಬಿಸಿ 97, ದಿನಾಂಕ: 03.02.1999 ಮತ್ತು ದಿನಾಂಕ: 13.04.1999ರನ್ವಯ ಪರಿಶೀಲಿಸಿ ಅಭಿಪ್ರಾಯ ನೀಡಲಾಗಿರುತ್ತದೆ. |
| ಇ)ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪತ್ರ ಸಂಖ್ಯೆ:ಸಿಆಸುಇ 174 ಸೇನಿಇ 2023 (ಸೇವಾ ನಿಯಮಗಳು-ಎ) ದಿನಾಂಕ:27.07.2023 ರಂದು ಲೋಕೋಪಯೋಗಿ ಇಲಾಖೆಗೆ ಮೀಸಲಾತಿ ಪಾಲನೆ ಮಾಡದಂತೆ ಅಭಿಪ್ರಾಯ ನೀಡಿದ ಅಧಿಕಾರಿಗಳ ಮೇಲೆ ಸರ್ಕಾರ ಇದುವರೆವಿಗೂ ಯಾವುದೇ ಕ್ರಮ ಕೈಗೊಳ್ಳದೇ ಇರುವುದಕ್ಕೆ ಕಾರಣಗಳೇನು; | ದಿನಾಂಕ: 02.01.2026ರಂದು ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗಾಗಿ ರಚಿಸಿರುವ ಸಚಿವ ಸಂಪುಟ ಉಪ ಸಮಿತಿಯಲ್ಲಿ ಸರ್ಕಾರದ ಆದೇಶಗಳ ಸಂಖ್ಯೆ: ಡಿಪಿಎಆರ್ 21 ಎಸ್‌ಬಿಸಿ 97, ದಿನಾಂಕ: 03.02.1999 ಮತ್ತು ದಿನಾಂಕ: 13.04.1999 ರಲ್ಲಿ ಕೆಲವು ಮಾರ್ಪಾಡುಗಳನ್ನು ಹೊರಡಿಸಲು ಸೂಚಿಸಿದ್ದು ಅದರಂತೆ ಸೂಕ್ತ ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ)ಸಿಆಸು ಇಲಾಖೆಯು ಸಾರಿಗೆ ಇಲಾಖೆಗೆ ಪತ್ರ ಸಂಖ್ಯೆ:ಸಿಆಸುಇ 208 ಸೇನಿಇ 2024, ದಿನಾಂಕ:26.11.2024 ರಂದು ಮತ್ತು ಒಳಾಡಳಿತ ಇಲಾಖೆಗೆ ಹಿಂಬರಹ ಸಂಖ್ಯೆ ಸಿಆಸುಇ 42 ಸೇನಿಇ 2024. ದಿನಾಂಕ:26.02.2024 ರಂದು ರೋಸ್ಟರ್ ಬಿಂದುಗಳನ್ನು ಪಾಲಿಸುವ ಅಗತ್ಯವಿಲ್ಲವೆಂದು ಹಿಂಬರಹ ನೀಡಿ ಮೀಸಲಾತಿ ರೋಸ್ಟರ್ ಪಾಲನೆ ಮಾಡದಂತೆ ತಿಳಿಸಿರುವುದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಧಿಕಾರಿ/ ನೌಕರರು ಬಡ್ತಿ ಮೀಸಲಾತಿಯಿಂದ ವಂಚಿತರಾಗುವುದಕ್ಕೆ ಕಾರಣರಾದವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ? ಸ್ಪಷ್ಟಪಡಿಸುವುದು: | |

**ಸಂಖ್ಯೆ: ಸಿಆಸುಇ 31 ಸೆನೆನಿ 2026.**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ